ಕರ್ನಾಟಕ ಸರ್ಕಾರ

# ಜಿಲ್ಲಾ ಪಂಚಾಯತ ಕಾರ್ಯಾಲಯ, ಬೆಳಗಾವಿ.

ಕ್ರಸಂಖ್ಯೆ:ಜಿಪಂಬೆ/ಶೌ.ನಿ/2013-14 ದಿನಾಂಕ: 02-09-2013

## ಜ್ಞಾಪನ

ವಿಷಯ: ಶಾಲೆಗಳ ಶೌಚಾಲಯ ನಿರ್ವಹಣೆಯಲ್ಲಿ ಗ್ರಾಮ ಪಂಚಾಯತ ಸಹಾಯ ಪಡೆಯುವ ಕುರಿತು

ಉಲ್ಲೇಖ:ದಿನಾಂಕ:24/08/2013 ರಂದು ಬೆಳಗಾವಿ ತಾಲೂಕಾ ಕೆ.ಡಿ.ಪಿ. ಸಭೆಯಲ್ಲಿ ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರೊಂದಿಗೆ ಚರ್ಚಿಸಿದಂತೆ

2. ಮಾನ್ಯ ನಿರ್ದೇಶಕರು, ಕಾರ್ಯಕ್ರಮಗಳು, ಸರ್ವ ಶಿಕ್ಷಣ ಅಭಿಯಾನ ಬೆಂಗಳೂರು ಇವರ ಪತ್ರ ಸಂ: ಸಶಿಅ:ಅಕ್ಸಿಸ್-62:ಶಾ.ನಿ/ಅನುದಾನ:2013-14 ದಿ:03-05-2013

3. ಮಾನ್ಯ ಆಯುಕ್ತರು, ಸಾ.ಶಿ.ಇಲಾಖೆ, ಬೆಂಗಳೂರು ಇವರ ಪತ್ರ ಸಂ:ಯೋ8:ಪಂಸೌ :ಕು.ನಿ:ಶೌ:ನಿ:ಅನು:01:2013-14 ದಿ:22-05-2013

*******

**ಪ್ರಸ್ತಾವನೆ:**

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಶೌಚಾಲಯ ಸೌಲಭ್ಯವನ್ನು ಒದಗಿಸುವುದು ಅವಶ್ಯಕವಾಗಿದ್ದು ಅದರಂತೆ ಸರ್ವ ಶಿಕ್ಷಣ ಅಭಿಯಾನ ಮತ್ತು ಪಂಚ ಸೌಲಭ್ಯ ಯೋಜನೆ ಹಾಗೂ ಸಂಪೂರ್ಣ ಸ್ವಚ್ಛತಾ ಆಂದೋಲನ ಕಾರ್ಯಕ್ರಮಗಳಡಿ ಎಲ್ಲಾ ಶಾಲೆಗಳಲ್ಲಿ ಶೌಚಾಲಯವನ್ನು ನಿರ್ಮಾಣ ಮಾಡಲಾಗಿದೆ. ಆದರೆ ಈ ಶೌಚಾಲಯಗಳನ್ನು ಸ್ವಚ್ಛವಾಗಿ ನಿರ್ವಹಿಸಲು ಯಾವುದೇ ಸಿಬ್ಬಂದಿ ಇರುವುದಿಲ್ಲ. ಇದಕ್ಕಾಗಿ ವಿದ್ಯಾರ್ಥಿಗಳನ್ನು ಕೆಲವೊಂದು ಸಂದರ್ಭಗಳಲ್ಲಿ ಬಳಸಿಕೊಳ್ಳಲಾಗುತ್ತಿದೆ. ಇದಕ್ಕೆ ಸಾರ್ವಜನಿಕರ ವಿರೋಧ ವ್ಯಕ್ತವಾಗುತ್ತಿದೆ. ಆದರೆ ಇದಕ್ಕಾಗಿ ಸ್ವಚ್ಛತಾ ಸಿಬ್ಬಂದಿಯನ್ನು ನೇಮಿಸಲು ಅವಕಾಶವಿರುವುದಿಲ್ಲ. ಆದ್ದರಿಂದ ಇದಕ್ಕೆ ಪರ್ಯಾಯ ವ್ಯವಸ್ಥೆ ಮಾಡಬೇಕಾಗಿರುವುದನ್ನು ವಿವಿಧ ವೇದಿಕೆಗಳಲ್ಲಿ ಚರ್ಚಿಸಿ ಗ್ರಾಮ ಪಂಚಾಯತ ಸ್ವಚ್ಛತಾ ಸಿಬ್ಬಂದಿಯನ್ನು ಈ ಕೆಲಸಕ್ಕಾಗಿ ಬಳಸಿಕೊಳ್ಳುವುದು ಸೂಕ್ತವಾಗಿದ್ದು ಮತ್ತು ಅವರಿಗೆ ನೀಡಬೇಕಾದ ಹೆಚ್ಚುವರಿ ಸಂಭಾವನೆಯನ್ನು ಶಿಕ್ಷಣ ಇಲಾಖೆಯಿಂದ ನೀಡಿದ ಎಸ್ ಡಿ ಎಮ್ ಸಿ ಯಲ್ಲಿ ಲಭ್ಯವಿರುವ ಅನುದಾನದಿಂದ ಭರಿಸುವ ಸಾಧ್ಯತೆಯ ಬಗ್ಗೆ ಚರ್ಚಿಸಿದೆ. ಈ ಬಗ್ಗೆ ಶಿಕ್ಷಣ ಇಲಾಖೆಯ ಸರ್ವ ಶಿಕ್ಷಣ ಅಭಿಯಾನದಿಂದ ಬಿಡುಗಡೆಯಾಗುವ ಶಾಲಾ ನಿರ್ವಹಣಾ ಅನುದಾನದಲ್ಲಿ ಸ್ವಲ್ಪ ಅನುದಾನವನ್ನು ಮತ್ತು ಪಂಚ ಸೌಲಭ್ಯ ಯೋಜನೆಯಡಿ ಕುಡಿಯುವ ನೀರು ಹಾಗೂ ಶೌಚಾಲಯ ನಿರ್ವಹಣೆಗಾಗಿ ಬಿಡುಗಡೆಯಾಗುವ ಅನುದಾನದಲ್ಲಿ 50% ಭಾಗವನ್ನು ಬಳಸಿಕೊಳ್ಳಬಹುದು ಎಂದು ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಬೆಳಗಾವಿ ಇವರು ಅಭಿಪ್ರಾಯ ನೀಡಿರುತ್ತಾರೆ. ಕಿರಿಯ ಪ್ರಾಥಮಿಕ ಶಾಲೆಗಳಿಗೆ ರೂ. 5000/- ದಿಂದ ರೂ.10000/- ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳಿಗೆ ರೂ. 10000/- ದಿಂದ 15000/- ಹಾಗೂ ಪ್ರೌಢ ಶಾಲೆಗಳಿಗೆ ರೂ.25000/- ಶಾಲಾ ನಿರ್ವಹಣಾ ಅನುದಾನ ಪ್ರತಿ ವರ್ಷ

ಬಿಡುಗಡೆಯಾಗುತ್ತಿದೆ. ಶಾಲೆಯಲ್ಲಿಯ ವಿದ್ಯಾರ್ಥಿಗಳ ಸಂಖ್ಯೆಗಳ ಆಧಾರದ ಮೇಲೆ ಪಂಚ ಸೌಲಭ್ಯ ಯೋಜನೆಯಡಿಯಲ್ಲಿ ಕುಡಿಯುವ ನೀರು ಹಾಗೂ ಶೌಚಾಲಯ ನಿರ್ವಹಣೆಗಾಗಿ ಅನುದಾನ ಬಿಡುಗಡೆ ಮಾಡಲಾಗುತ್ತಿದೆ. ಇದನ್ನು ಕೂಡ ಈ ಕಾರ್ಯಕ್ರಮಕ್ಕೆ ಬಳಸಬಹುದಾಗಿದೆ. ಈ ಅನುದಾನವನ್ನು ಗ್ರಾಮ ಪಂಚಾಯತಗಳಿಗೆ ನೀಡಿ ಗ್ರಾಮ ಪಂಚಾಯತಗಳು ಈ ಅನುದಾನದಿಂದ ಸ್ವಚ್ಛತಾ ಸಿಬ್ಬಂದಿಗಳಿಗೆ ಹೆಚ್ಚುವರಿ ಸಂಭಾವನೆ ನೀಡಿದಲ್ಲಿ ಶೌಚಾಲಯ ಸ್ವಚ್ಛತೆಗೆ ಮಾನವ ಸಂಪನ್ಮೂಲ ಒದಗಿಸಲು ಸಾಧ್ಯವಾಗುತ್ತದೆ. ಆದ್ದರಿಂದ ಈ ಕೆಳಗಿನಂತೆ ಆದೇಶಿಸಿದೆ.

## -: ಆದೇಶ :-

ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳು ರೂ 2500/- ,ಹಿರಿಯ ಪ್ರಾಥಮಿಕ ಶಾಲೆಗಳು ತಲಾ 5000/- ಮತ್ತು ಪ್ರೌಢ ಶಾಲೆಗಳು 8000/- ನಿರ್ವಹಣಾ ಅನುದಾನ ಮತ್ತು ಕುಡಿಯುವ ನೀರು ನಿರ್ವಹಣೆಯ 50% (ಪಂಚಸೌಲಭ್ಯಯೋಜನೆಯಡಿ) ವನ್ನು ಗ್ರಾಮ ಪಂಚಾಯತಗಳಿಗೆ ಜಮಾ ಮಾಡುವುದು. ಗ್ರಾಮ ಪಂಚಾಯತಗಳು ತಮ್ಮ ಸ್ವಚ್ಛತಾ ಸಿಬ್ಬಂದಿಯನ್ನು ಪ್ರತಿ ದಿನ ನಿಯೋಜಿಸಿ ಶಾಲೆಗಳ ಶೌಚಾಲಯಗಳನ್ನು ಶುಚಿಯಾಗಿಟ್ಟುಕೊಳ್ಳಬೇಕು. ಶಾಲೆಗಳಿಂದ ಸಂದಾಯವಾಗುವ ಅನುದಾನವನ್ನು ಈ ಸಿಬ್ಬಂಧಿಗಳಿಗೆ ಹೆಚ್ಚುವರಿ ಗೌರವಧನ ನೀಡಲು ಬಳಸಿಕೊಳ್ಳುವುದು. ಶಾಲೆಗಳಿಂದ ಸಂಗ್ರಹಿಸಬೇಕಾದ ಅನುದಾನ ಮತ್ತು ಸ್ವಚ್ಛತಾ ಸಿಬ್ಬಂದಿಗೆ ನೀಡಬೇಕಾದ ಗೌರವಧನದ ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ. ಪಂಚಾಯತ ಅಭಿವೃದ್ಧಿ ಅಧಿಕಾರಿಗಳು ಇದನ್ನು ಕಟುನಿಟ್ಟಾಗಿ ಪಾಲಿಸಿ ಶೌಚಾಲಯ ಸ್ವಚ್ಚವಾಗಿರಿಸುವಂತೆ ನೋಡಿಕೊಳ್ಳುವುದು.

(ದೀಪಚೋಲನ್)
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ, ಬೆಳಗಾವಿ

ಗೆ,

1. ಉಪನಿರ್ದೇಶಕರು., ಸಾರ್ವಜನಿಕ ಶಿಕ್ಷಣ ಇಲಾಖೆ ಬೆಳಗಾವಿ / ಚಿಕ್ಕೋಡಿ
2. ಜಿಲ್ಲೆಯ ಎಲ್ಲಾ ತಾಲ್ಲೂಕ ಪಂಚಾಯತದ ಕಾರ್ಯನಿರ್ವಹಣಾ ಅಧಿಕಾರಿಗಳು
3. ಜಿಲ್ಲೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಕಳುಹಿಸುತ್ತ ನಿಮ್ಮ ವಲಯಕ್ಕೆ ಸಂಬಂಧಿಸಿದ ಶಾಲೆಗಳಿಗೆ ಸದರಿ ವಿಷಯವನ್ನು ತಿಳಿಸಿ ಕೂಡಲೇ ಕ್ರಮ ಕೈಕೊಳ್ಳಲು ತಿಳಿಸಿದೆ.
4. ಪಂಚಾಯತ ಅಭಿವೃದ್ಧಿ ಅಧಿಕಾರಿಗಳಿಗೆ ಕಾರ್ಯಕ್ರಮದ ಅನುಷ್ಠಾನಕ್ಕಾಗಿ.

## ಅನುಬಂಧ

| ಕ್ರ.ಸಂ. | ಶಾಲೆಗಳ ವಿವರ | ಶೌಚಾಲಯ ನಿರ್ವಹಣೆ ಅನುದಾನದಿಂದ | ಶಾಲಾ ನಿರ್ವಹಣೆ ಅನುದಾನದಿಂದ | ಒಟ್ಟು | ಸ್ವಚ್ಛತಾ ಸಿಬ್ಬಂದಿಗೆ ಮಾಸಿಕ ಗೌರವ ಧನ |
|---|---|---|---|---|---|
| 1 | ಕಿರಿಯ ಪ್ರಾಥಮಿಕ (ವಿಧ್ಯಾರ್ಥಿಗಳ ಸಂಖ್ಯೆ ಆಧಾರದ ಮೇಲೆ) | | | | |
| | 25 ಕ್ಕಿಂತ ಕಡಿಮೆ ವಿಧ್ಯಾರ್ಥಿಗಳು | 1500-00 | 2500-00 | 4000-00 | 400-00 |
| | 26 ರಿಂದ 125 ವಿಧ್ಯಾರ್ಥಿಗಳು | 2000-00 | 2500-00 | 4500-00 | 450-00 |
| 2 | ಹಿರಿಯ ಪ್ರಾಥಮಿಕ (ವಿಧ್ಯಾರ್ಥಿಗಳ ಸಂಖ್ಯೆ ಆಧಾರದ ಮೇಲೆ) | | | | |
| | 126 ಕ್ಕಿಂತ ಕಡಿಮೆ ವಿಧ್ಯಾರ್ಥಿಗಳು | 3000-00 | 5000-00 | 8000-00 | 800-00 |
| | 126 ರಿಂದ 250 ವಿಧ್ಯಾರ್ಥಿಗಳು | 4000-00 | 5000-00 | 9000-00 | 900-00 |
| | 250ಕ್ಕಿಂತ ಹೆಚ್ಚು ವಿಧ್ಯಾರ್ಥಿಗಳು | 5000-00 | 5000-00 | 10000-00 | 1000-00 |
| 3 | ಪ್ರೌಢ ಶಾಲೆ (ವಿಧ್ಯಾರ್ಥಿಗಳ ಸಂಖ್ಯೆ ಆಧಾರದ ಮೇಲೆ) | | | | |
| | 200 ಕ್ಕಿಂತ ಕಡಿಮೆ ವಿಧ್ಯಾರ್ಥಿಗಳು | 4000-00 | 8000-00 | 12000-00 | 1200-00 |
| | 201 ರಿಂದ 400 ವಿಧ್ಯಾರ್ಥಿಗಳು | 5000-00 | 8000-00 | 13000-00 | 1300-00 |
| | 401ಕ್ಕಿಂತ ಹೆಚ್ಚು ವಿಧ್ಯಾರ್ಥಿಗಳು | 6700-00 | 8000-00 | 14700-00 | 1470-00 |

(ದೀಪ ಚೋಳನ್)
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ, ಬೆಳಗಾವಿ

ಗೆ,

1. ಉಪನಿರ್ದೇಶರಕು., ಸಾರ್ವಜನಿಕ ಶಿಕ್ಷಣ ಇಲಾಖೆ ಬೆಳಗಾವಿ / ಚಿಕ್ಕೋಡಿ
2. ಜಿಲ್ಲೆಯ ಎಲ್ಲಾ ತಾಲ್ಲೂಕ ಪಂಚಾಯತದ ಕಾರ್ಯನಿರ್ವಹಣಾ ಅಧಿಕಾರಿಗಳು
3. ಜಿಲ್ಲೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಕಳುಹಿಸುತ್ತ ನಿಮ್ಮ ವಲಯಕ್ಕೆ ಸಂಬಂಧಿಸಿದ ಶಾಲೆಗಳಿಗೆ ಸದರಿ ವಿಷಯವನ್ನು ತಿಳಿಸಿ ಕೂಡಲೇ ಕ್ರಮ ಕೈಕೊಳ್ಳಲು ತಿಳಿಸಿದೆ.
4. ಪಂಚಾಯತ ಅಭಿವೃದ್ಧಿ ಅಧಿಕಾರಿಗಳಿಗೆ ಕಾರ್ಯಕ್ರಮದ ಅನುಷ್ಠಾನಕ್ಕಾಗಿ.